**ಸಾಕ್ಷಿಯನ್ನು ದಿನಾಂಕ: 22.11.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ MTY ವಕೀಲರಿಂದಃ**

ನಾನು ಬಿಕಾಂ ಪದವಿದರಳು. ನಾನು 1 ರಿಂದ 10 ನೇ ತರಗತಿಯವರೆಗೆ ಕಾದ್ರೊಳ್ಳಿ ಗ್ರಾಮದಲ್ಲಿ ಶಾಲೆ ಕಲೆತಿರುತ್ತೇನೆ. ನನ್ನ ತಂದೆ ತಾಯಿಗೆ ನಾವು ಒಟ್ಟು 4 ಜನ ಹೆಣ್ಣು ಮಕ್ಕಳು. ನಾವು ಒಟ್ಟು 4 ಜನ ಹೆಣ್ಣುಮಕ್ಕಳಲ್ಲಿ ನಾನು 3ನೇ ಮಗಳು. ನನ್ನ 1 ಮತ್ತು 2ನೇ ಅಕ್ಕಂದಿರ 1ನೇ ತರಗತಿಯನ್ನು ನನ್ನ ತಾಯಿಯ ತವರು ಮನೆಯಾದ ವಿರಾಪೂರದಲ್ಲಿ ಕಲೆತಿರುತ್ತಾರೆ ಹಾಗೂ ಮುಂದಿನ ವಿದ್ಯಾಭ್ಯಾಸವನ್ನು ಕಾದ್ರೊಳ್ಳಿಯಲ್ಲಿ ಕಲೆತಿರಬಹುದು ಆದರೆ ನನಗೆ ಸರಿಯಾಗಿ ನೆನಪಿರುವುದಿಲ್ಲ. ನನ್ನ ತಾಯಿಯ ತವರು ಮನೆ ವೀರಾಪೂರ ಗ್ರಾಮ ಎಂ.ಕೆ.ಹುಬ್ಬಳ್ಳಿಯ ಹತ್ತಿರ ಇರುತ್ತದೆ.

ನನ್ನ ತಂದೆ ತಾಯಿ ಎಲ್ಲಿ ಮತ್ತು ಯಾವಾಗ ಮದುವೆ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿ ಮದುವೆಯಾದ ಮೊದಲು ಒಂದು ವರ್ಷ ವೀರಾಪೂರ ಗ್ರಾಮದಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ದೊಡ್ಡಪ್ಪನ ಜೊತೆಗೆ ಕಾದ್ರೊಳ್ಳಿ ಗ್ರಾಮದಲ್ಲಿ ಇರುತ್ತಿದ್ದರು. ನನ್ನ ತಂದೆ ತಾಯಿಯು ಎಲ್ಲಿ ಮನೆ ಕಟ್ಟಿದ್ದರು ಎಂದರೆ ಸಾಕ್ಷಿಯು ಮೊದಲಿಗೆ ಹಳೇ ಕಾದ್ರೊಳ್ಳಿಯಲ್ಲಿ ಕಟ್ಟಿದ್ದರು ಅದು ಮುಳುಗಡೆ ಆದ ನಂತರ ಹೊಸ ಕಾದ್ರೊಳ್ಳಿಯಲ್ಲಿ ಕಟ್ಟಿರುತ್ತಾರೆ. ಸದರಿ ಮನೆಯನ್ನು ಸುಮಾರು 40-45 ವರ್ಷಗಳ ಹಿಂದೆ ನಾನು ಹುಟ್ಟುವ ಮೊದಲೇ ಕಟ್ಟಿರುತ್ತಾರೆ. ನನ್ನ ತಂದೆಯು ಕಟ್ಟಿದ ಮನೆ ನಂಬರ 220/ಬಿ. ಸದರಿ ಮನೆ ನಂ.

220/ಬಿ ಇದರ ಪೂರ್ವಕ್ಕೆ ಕುರಬರ ಜಾಗ, ಪಶ್ಚಿಮಕ್ಕೆ ಲಕ್ಷಣ ಸುಣಗಾರ ಇವರ ಮನೆ, ಉತ್ತರಕ್ಕೆ ಅದೃಶ್ಯಪ್ಪ ಪಾರಿ ಹಾಗೂ ದಕ್ಷಿಣಕ್ಕೆ ಸರ್ಕಾರಿ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಇರುವ ಸರ್ಕಾರಿ ರಸ್ತೆಯು ಸುಮಾರು 10 ಫೂಟ್ ಒಳಗಡೆ ಇರಬಹುದು ಆದರೆ ನಿಖರವಾದ ಅಳತೆ ನನಗೆ ಗೊತ್ತಿರುವುದಿಲ್ಲ. ನಾನು ಈಗ ಹೇಳಿದ ಚಕಬಂದಿಯನ್ನು ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ವಾದ ಪತ್ರವನ್ನು ತೋರಿಸಿ ಇದರಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಚಕಬಂದಿಯನ್ನು ಬರೆಯಿಸುವ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ಮನೆ ನಂ. 220/ಬಿ ಇದು ಪೂರ್ವದಿಂದ ಪಶ್ಚಿಮಕ್ಕೆ 25 ಫೂಟ ಅಗಲ ಹಾಗೂ ದಕ್ಷಿಣದಿಂದ ಉತ್ತರಕ್ಕೆ 80 ಫೂಟ್ ಉದ್ದ ಇರುತ್ತದೆ. ಸದರಿ ಆಸ್ತಿಯ ಮೂಲ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ.

ಸರ್ವೆ ನಂ. 193/1 ಇದು ಯಾವ ಗ್ರಾಮದಲ್ಲಿರುತ್ತದೆ ಎಂದರೆ ಸಾಕ್ಷಿಯು ಹಳೆ ಕಾದ್ರೊಳ್ಳಿ ಗ್ರಾಮದಲ್ಲಿರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿಯ ಕ್ಷೇತ್ರ ಹಾಗೂ ಚಕಬಂದಿ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ. 193/1 ರ ಕ್ಷೇತ್ರ ಮತ್ತು ಚಕಬಂದಿಯನ್ನು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ನಿಜ. ಸದರಿ ಆಸ್ತಿಯ ಮೂಲ ಮಾಲೀಕರು ಯಾರು ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪ ಮತ್ತು ನನ್ನ ತಂದೆಯವರು ಜಡಗಿ ಎಂಬುವವರಿಂದ ಖರೀದಿ ಮಾಡಿದ ಆಸ್ತಿ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ನನ್ನ ತಂದೆ ಹಾಗೂ ದೊಡ್ಡಪ್ಪ ಸೇರಿ ಖರೀದಿ ಮಾಡಿರುತ್ತಾರೆ ಎಂದು ನ್ಯಾಯಾಲಯಕ್ಕೆ ದಾಖಲೆಗಳನ್ನು

ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಸದರಿ ದಾಖಲೆಗಳು ನನ್ನದೊಡ್ಡಪ್ಪನೇ ಹಿರಿತನ ಮಾಡುತ್ತಿದ್ದರಿಂದ ಅವರ ಹತ್ತಿರ ಇರುವ ಕಾರಣ ಹಾಜರುಪಡಿಸಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯನ್ನು ಯಾವಗಾ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಖರೀದಿ ಮಾಡಿದ ಖರೀದಿ ಪತ್ರವನ್ನು ನೋಡಿರುವುದಿಲ್ಲ. ನನ್ನ ತಂದೆಯು ನನ್ನ ದೊಡ್ಡಪ್ಪನಿಗಿಂತ ಚಿಕ್ಕವರು ಎಂದರೆ ನಿಜ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪನ ನಡುವೆ ವಯಸ್ಸಿನ ಅಂತರ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಶಾಲೆಗೆ ಹೋಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 31 ರಲ್ಲಿ ನನ್ನ ದೊಡ್ಡಪ್ಪನ ಜನ್ಮ ದಿನಾಂಕ 01.05.1948 ಎಂದು ಇರುತ್ತದೆ ಎಂದರೆ ನಿಜ. ಅದೇ ರೀತಿ ನಿಪಿ 32 ರಲ್ಲಿ ನನ್ನ ತಂದೆಯ ಜನ್ಮ ದಿನಾಂಕ 11.08.1949 ಎಂದು ಇರುತ್ತದೆ ಎಂದರೆ ನಿಜ. ಅದೇ ರೀತಿಯಾಗಿ ನಿಪಿ 31 ಮತ್ತು 32 ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪನ 2ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ನಿಜ.

ನನ್ನ ತಂದೆ ಹಾಗೂ ದೊಡ್ಡಪ್ಪನ ವಯಸ್ಸಿನ ಅಂತರ ಕೇವಲ ಒಂದೂವರೆ ವರ್ಷ ವಯಸ್ಸಿ ನ ಅಂತರ ಮಾತ್ರ ಇರುತ್ತದೆ ಎಂದರೆ ಸಾಕ್ಷಿಯು ಸುಮಾರು 10 ವರ್ಷ ವಯಸ್ಸಿನ ಅಂತರ ಇರಬಹುದು ಎಂದು ಹೇಳುತ್ತಾರೆ. ನನ್ನ ಅಜ್ಜ ಬಸಪ್ಪ ಇವರಿಗೆ ಒಟ್ಟು 3 ಜನ ಮಕ್ಕಳು. ಸದರಿಯವರು ಯಾರು ಎಂದರೆ ಸಾಕ್ಷಿಯು ಮೊದಲನೇಯವರು ಮಲ್ಲವ್ವ, ಕಲ್ಲಪ್ಪ ಹಾಗೂ ನನ್ನ ತಂದೆಯವರು ಕೊನೆಯವರು ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ ಮಲ್ಲವ್ವಳನ್ನು

ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಲ್ಲವ್ವ ಇವರು ಮರಣ ಹೊಂದಿರುವುದರಿಂದ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಮಲ್ಲವ್ವ ಇವರು ಮರಣ ಹೊಂದಿರುವ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಯಿಸಿರುವುದಿಲ್ಲ ಹಾಗೂ ಅವರ ವಾರಸುದಾರರನ್ನು ಸಹ ಈ ದಾವೆಯಲ್ಲಿ ಪಕ್ಷಕಾರನನ್ನಾಗಿ ಮಾಡಿರುವುದಿಲ್ಲ ಎಂದರೆ ನಿಜ.

ದಾವಾ ಆಸ್ತಿಯ ನಂ. 31/ಬಿ ಇದು ಸದ್ಯ ಖುಲ್ಲಾ ಜಾಗ ಇರುತ್ತದೆ ಎಂದರೆ ಸಾಕ್ಷಿಯು ಮನೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿಯ ಅಳತೆ ನನಗೆ ಈಗ ನೆನಪಿಲ್ಲ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿ ನಂ. 31/ಬಿ ಇದು ಖುಲ್ಲಾ ಜಾಗ ಮತ್ತು ಹಿತ್ತಲು ಎಂದು ಬರೆಯಿಸಿರುತ್ತದೆ ಎಂದರೆ ಸಾಕ್ಷಿಯು ಮನೆ ಎಂದು ಬರೆಯಿಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಆಸ್ತಿಯ ದಕ್ಷಿಣಕ್ಕೆ ರಸ್ತೆ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತಕ್ಕೆ ರಸ್ತೆ ಪೂರ್ವಕ್ಕೆ ಏನು ಇರುತ್ತದೆ ಎಂದು ನನಗೆ ಈಗ ಗೊತ್ತಿಲ್ಲ. ಸದರಿ ಆಸ್ತಿಯು ಮೂಲತಃ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಆಸ್ತಿ. ಸದರಿ ಆಸ್ತಿಯನ್ನು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ.

ಅದೇ ರೀತಿ ದಾವಾ ಆಸ್ತಿ ನಂ. 236 ಇದು ತುರಮರಿ ಗ್ರಾಮದಲ್ಲಿ ಬರುತ್ತದೆ. ಸದರಿ ಆಸ್ತಿಯ ಅಳತೆ ಹಾಗೂ ಚಕಬಂದಿ ನನಗೆ ಈಗ ನೆನಪಿಲ್ಲ. ಸದರಿ ಆಸ್ತಿಯಲ್ಲಿ ಮನೆ ಇರುತ್ತದೆ. ನನ್ನ ವಾದ ಪತ್ರದಲ್ಲಿ ಸದರಿ ಆಸ್ತಿಯು ಖುಲ್ಲಾ ಜಾಗ ವ ಹಿತ್ತಲು ಎಂದು ಬರೆಯಿಸಿರುತ್ತೇನೆ ಎಂದರೆ ನಿಜ. ಸದರಿ ಆಸ್ತಿಯು ನನ್ನ ದೊಡ್ಡಪ್ಪನ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಉತಾರವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಯು ನನ್ನ ದೊಡ್ಡಪ್ಪನ ಹೆಸರಿಗಿಂತ ಮೊದಲು ನನ್ನ ಅಜ್ಜನ ಹೆಸರಿನಲ್ಲಿತ್ತು. ಹೀಗೆ ಮೊದಲು ನನ್ನ ಅಜ್ಜನ ಹೆಸರಿನಲ್ಲಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಆಸ್ತಿಯನ್ನು ನನ್ನ ದೊಡ್ಡಪ್ಪ ಈಗ ಮಾರಾಟ ಮಾಡಿರುತ್ತಾರೆ. ಹೀಗೆ ಮಾರಾಟ ಮಾಡಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ನನ್ನ ವಾದ ಪತ್ರದಲ್ಲಿ ತೋರಿಸಿದಂತೆ ಮಲಪ್ರಭಾ ಕೋ ಆಪರೇಟೀವ್ ಸಕ್ಕರೆ ಕಾರ್ಖಾನೆಯಲ್ಲಿರುವ ಶೇರ್ ನನ್ನ ದೊಡ್ಡಪ್ಪನ ಹೆಸರಿನಲ್ಲಿರುತ್ತದೆ. ಸದರಿ ಶೇರ್ ಎಷ್ಟು ಹಣಕ್ಕೆ ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಶೇರ ಬಗ್ಗೆ ನನ್ನ ತಂದೆಯನ್ನು ನಾನು ಕೇಳಿರುತ್ತೇನೆ. ಸದರಿ ಶೇರನ್ನು ಇಬ್ಬರು ಸೇರಿ ಇಟ್ಟಿರುತ್ತೇವೆ ಎಂದು ನನ್ನ ತಂದೆ ನನಗೆ ಹೇಳಿರುತ್ತಾರೆ.

ದಾವಾ ಆಸ್ತಿಗಳು ನಮ್ಮದೇ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ನಿಪಿ 2 ರಲ್ಲಿ ನನ್ನ ದೊಡ್ಡಪ್ಪನ ಹೆಸರು ಇರುತ್ತದೆ ಎಂದರೆ ನಿಜ. ನಿಪಿ 5 ರಲ್ಲಿಯು ನನ್ನ ದೊಡಪ್ಪ ಕಲ್ಲಪ್ಪನ ಹೆಸರು ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಇರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಹೆಸರು ಮಾತ್ರ ಇರುವ ಉತಾರ ಸಹ ಇರುತ್ತದೆ ಎಂದು ಹೇಳುತ್ತಾರೆ. ನಿಪಿ 3 ರಲ್ಲಿ ನನ್ನ ತಂದೆ ಮತ್ತು ನನ್ನ ದೊಡಪ್ಪನ ಹೆಸರು ಜಂಟಿ ಆಗಿರುತ್ತದೆ. ನಿಪಿ 6 ರಲ್ಲಿ ನನ್ನ ದೊಡ್ಡಪ್ಪ ಕಲ್ಲಪ್ಪನ ಹೆಸರು ಮಾತ್ರ ಇರುತ್ತದೆ ಎಂದರೆ ನಿಜ. ನಿಪಿ 7 ರಲ್ಲಿ ನನ್ನ ದೊಡ್ಡಪ್ಪ ಕಲ್ಲಪ್ಪನ

ಹೆಸರು ಮಾತ್ರ ಇರುತ್ತದೆ ಎಂದರೆ ನಿಜ.

ನಿಪಿ 9 ರ ಪ್ರಕಾರ ಸರ್ವೆ ನಂ. 193/1 ಇದು ಮೊದಲು ನನ್ನ ದೊಡ್ಡಪ್ಪ ಕಲ್ಲಪ್ಪನ ಹೆಸರಿನಲ್ಲಿತ್ತು ಎಂದರೆ ನಿಜ. ನಿಪಿ 9 ರಲ್ಲಿ ಸರ್ವೆ ನಂ. 193/1 ಇದು ಮುಳುಗಡೆ ಆದ ನಂತರ ಅದಕ್ಕೆ ಪರಿಹಾರವಾಗಿ ಆಸ್ತಿ ನಂ. 220/ಬಿ ನ್ನು ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ನಿಜ. ನಿಪಿ 12 ರಿಂದ 16 ರಂತೆ ಇರುವ ವಿದ್ಯುತ್ ಬಿಲ್ಲಗಳು ನನ್ನ ತಾಯಿಯ ಹೆಸರಿನಲ್ಲಿರುತ್ತವೆ ಎಂದರೆ ನಿಜ. ಸದರಿ ವಿದ್ಯುತ್ ಬಿಲ್ಲಗಳಲ್ಲಿ ಯಾವ ಆಸ್ತಿಗೆ ಸಂಬಂಧಿಸಿದಂತೆ ಹಾಗೂ ಆಸ್ತಿಯ ವಿಳಾಸ ಇರುವುದಿಲ್ಲ ಎಂದರೆ ನನ್ನ ತಾಯಿಯ ಹೆಸರಿನಲ್ಲಿರುತ್ತವೆ ಎಂದು ಹೇಳುತ್ತಾರೆ. ಸದರಿ ಬಿಲ್ಲಗಳಲ್ಲಿ ವಿಳಾಸ ನಮೂದು ಇರುವುದಿಲ್ಲ ಎಂದರೆ ನಿಜ.

ದಾವಾ ಆಸ್ತಿಗಳು ನನ್ನ ದೊಡ್ಡಪ್ಪ ಕಲ್ಲಪ್ಪನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಯು ಸ್ವಂತ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಜಮೀನ ಸರ್ವೆ ನಂ. 85/6 ಕ್ಷೇತ್ರ 01 ಎಕರೆ 17 ಗುಂಟೆ ಇದ್ದು ಅದರಲ್ಲಿ ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪನಿಗ ಸಮಭಾಗ ಇರುತ್ತದೆ. ಸದರಿ ಆಸ್ತಿಯನ್ನು ಈ ದಾವೆಯ ವಾದ ಪತ್ರದಲ್ಲಿ ತೋರಿಸಿರುವುದಿಲ್ಲ. ಸದರಿ ಆಸ್ತಿಯು ಮೂಲತಃ ಯಾರದು ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಇಬ್ಬರು ಸೇರಿ ಖರೀದಿ ಮಾಡಿದ ಆಸ್ತಿ ಎಂದು ಹೇಳುತ್ತಾರೆ.

ದಾವಾ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ. ದಾವಾ ಆಸ್ತಿಗಳನ್ನು ನನ್ನ ತಂದೆ ಹಾಗೂ ನನ್ನ ದೊಡಪ್ಪನಾದ

ಕಲ್ಲಪ್ಪ ಇಬ್ಬರೂ ಸೇರಿ ಖರೀದಿ ಮಾಡಿರುತ್ತಾರೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನಿಗೆ ಪಿತ್ರಾರ್ಜಿತ ಆಸ್ತಿಯೆಂದು ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿಯು ತುರುಮರಿ ಗ್ರಾಮದಲ್ಲಿ ನನ್ನ ಅಜ್ಜನ ಹೆಸರಿನಲ್ಲಿ ಆಸ್ತಿ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಹ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ಆಸ್ತಿ ಸರ್ವೆ ನಂ. 162 ಇರಬಹುದು. ಸದರಿ ಆಸ್ತಿಯ ಬಗ್ಗೆ ನನ್ನ ವಾದ ಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ನಿಜ. ಸರ್ವೆ ನಂ. 162 ಇದು ನನ್ನ ಅಜ್ಜನ ಹೆಸರಿನಲ್ಲಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ 24 ನ್ನು ಸರ್ವೆ ನಂ. 162 ರ ಕುರಿತು ಹಾಜರುಪಡಿಸಿರುತ್ತೇನೆ. ಸರ್ವೆ ನಂ. 162 ಇದರ ಒಟ್ಟು ಕ್ಷೇತ್ರ 8 ಎಕರೆ ಇರುತ್ತದೆ.

ಆಸ್ತಿ ನಂ. 220/ಬಿ ಹಾಗೂ 31/ಬಿ ರಂತೆ ಇರುವ ಆಸ್ತಿಗಳ ಈಗಿನ ಮೌಲ್ಯ ಸುಮಾರು 10-12 ಲಕ್ಷ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ತೋರಿಸಿದ ಎಲ್ಲಾ ಆಸ್ತಿಗಳ ಒಟ್ಟು ಮೌಲ್ಯ ಸುಮಾರು 25 ಲಕ್ಷ ಆಗುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

ನನ್ನ ದೊಡಪ್ಪ ಕಲ್ಲಪ್ಪ ವ್ಯವಸಾಯವನ್ನು ಮಾಡುತ್ತಿದ್ದರು. ನನ್ನ ಅಜ್ಜ ಮರಣ ಹೊಂದಿದ ನಂತರ ತುರುಮರಿ ಬಿಟ್ಟು ಕಾದ್ರೊಳ್ಳಿಗೆ ಬಂದು ವಾಸ ಮಾಡುತ್ತಿದ್ದರು. ಹೀಗೆ ಯಾವ ವರ್ಷದಲ್ಲಿ ಕಾದ್ರೊಳ್ಳಿಗೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹೀಗೆ ಕಾದ್ರೊಳ್ಳಿ ಗ್ರಾಮಕ್ಕೆ ನನ್ನ ದೊಡ್ಡಪ್ಪ ಹಾಗೂ ನನ್ನ ತಂದೆ ಬಂದಿರುತ್ತಾರೆ. ನನ್ನ ಅತ್ತೆಯನ್ನು ಕಾದ್ರೊಳ್ಳಿಗೆ ಮದುವೆ ಮಾಡಿ ಕೊಟ್ಟಿದ್ದರು. ನನ್ನ

ತಂದೆ ಹಾಗೂ ನನ್ನ ದೊಡ್ಡಪ್ಪ ಇವರನ್ನು ನನ್ನ ಅತ್ತೆಯು ನನ್ನ ಅಜ್ಜ ಮರಣ ಹೊಂದಿದ ನಂತರ ಕಾದ್ರೊಳ್ಳಿಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಮದುವೆ ಆದ ನಂತರ ನನ್ನ ತಂದೆಯ ಮದುವೆಯನ್ನು ನನ್ನ ದೊಡ್ಡಪ್ಪನೇ ಮಾಡಿಸಿರುತ್ತಾನೆ ಎಂದರೆ ಸಾಕ್ಷಿಯು ಇಬ್ಬರೂ ಸೇರಿ ಹಳೇ ಕಾದ್ರೊಳ್ಳಿಯಲ್ಲಿ ಮದುವೆ ಆಗಿರುತ್ತಾರೆ ಎಂದು ಹೇಳುತ್ತಾರೆ.

ನನ್ನ ತಂದೆಯು ಮದುವೆ ಆದ ನಂತರ ನನ್ನ ತಾಯಿಯ ತವರು ಮನೆಯಾದ ವೀರಾಪೂರ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹೀಗೆ ವೀರಾಪೂರ ಗ್ರಾಮದಲ್ಲಿ ಇರುವುದರಿಂದ ನನ್ನ ಅಕ್ಕಂದಿರಾದ ಗಂಗಮ್ಮ ಮತ್ತು ಸವೀತಾ ಇವರಿಬ್ಬರೂ ಅಲ್ಲಿಯೇ ಶಾಲೆಯನ್ನು ಕಲೆತಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಸಹೋದರಿಯರೆಲ್ಲರೂ ವೀರಾಪೂರ ಗ್ರಾಮದಲ್ಲಿಯೇ ಜನಿಸಿರುತ್ತೇವೆ ಎಂದರೆ ನಿಜ. ನಾವೆಲ್ಲರೂ ಸ್ವಲ್ಪ ದೊಡ್ಡವರಾದ ನಂತರ ಸರ್ವೆ ನಂ. 85 ರಲ್ಲಿ ಒಂದು ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ನಾವು ಹೀಗೆ ಗುಡಿಸಲಲ್ಲಿ ಇರುವುದನ್ನು ನೋಡಿ ಊರಿನ ಜನರು ನನ್ನ ದೊಡ್ಡಪ್ಪನಿಗೆ ನಿನ್ನ ತಮ್ಮನನ್ನು ಕರೆದುಕೊಂಡು ಬರುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ ಊರಿನ ಜನ ಹೇಳಿದ್ದರಿಂದ ನನ್ನ ದೊಡ್ಡಪ್ಪನು ನಮ್ಮನ್ನು ಕರೆದುಕೊಂಡು ಬಂದು ಕಾದ್ರೊಳ್ಳಿ ಗ್ರಾಮದಲ್ಲಿ ಜಾಗ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾವು ಅಲ್ಲಿಯೇ ಇದ್ದೇವು ಎಂದು ಹೇಳುತ್ತಾರೆ. ನಮ್ಮ ದೊಡ್ಡಪ್ಪ ಕೊಟ್ಟ ಜಾಗದಲ್ಲಿ ಈಗಲೂ ಸಹ ಶೆಡ್ ಇರುತ್ತದೆ ಎಂದರೆ ಸಾಕ್ಷಿಯು ನಾವು ಮನೆಯನ್ನು ಕಟ್ಟಿರುತ್ತೇವೆ ಎಂದು ಹೇಳುತ್ತಾರೆ. ನನ್ನ

ವಾದ ಪತ್ರದಲ್ಲಿ ದಾವಾ ಆಸ್ತಿ ನಂ. 220/ಬಿ ರಲ್ಲಿ ತಾತ್ಕಾಲಿಕ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದೇವು ಎಂದು ಬರೆಯಿಸಿರುತ್ತೇನೆ ಎಂದರೆ ನಿಜ. ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಗಳ ಮೌಲ್ಯವನ್ನು ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ನಾವು ಸಹ ಕಬ್ಜಾದಲ್ಲಿರುತ್ತೇವೆ ಹಾಗೂ ಕಬ್ಜಾದಲ್ಲಿರುತ್ತೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ. ಹೀಗೆ ಕಬ್ಜಾದಲ್ಲಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಹಾಗೂ ಕಬ್ಜಾದಲ್ಲಿರುತ್ತೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಗಳ ಕಬ್ಜಾದಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ದೊಡ್ಡಪ್ಪನ ಜೀವಿತಾವದಿಯಲ್ಲಿಯೇ ದಾವಾ ಆಸ್ತಿಗಳಲ್ಲಿ ನಮ್ಮ ಭಾಗದ ಹಿಸ್ಸೆಯನ್ನು ಕೊಡಲು ಕೇಳಿರುತ್ತೇವೆ. ವಾಟ್ನಿ ಮಾಡಿಕೊಡುವ ಕುರಿತು ಊರಿನಲ್ಲಿ ಹಿರಿಯರನ್ನು ಸಹ ಕೂಡಿಸಿ ಕೇಳಿರುತ್ತೇವೆ. ನಮ್ಮ ದೊಡ್ಡಪ್ಪನ ಜೀವಿತಾವದಿಯಲ್ಲಿ ವಾಟ್ನಿ ಮಾಡಿಕೊಡುವ ಕುರಿತು ಕೇಳಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯು 25 ನೇ ಅಕ್ಟೋಬರ್ 2020 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ದೊಡಪ್ಪ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. 2016-17 ರಲ್ಲಿ ನಮ್ಮ ತಂದೆ ಸದೃಢವಾಗಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಗೆ ಸಣ್ಣ ಹೃದಯಘಾತ ಆಗಿರುತ್ತದೆ ಎಂದು ಹೇಳುತ್ತಾರೆ. ಆ

ಸಮಯದಲ್ಲಿ ನನ್ನ ತಂದೆಯು ತಾನೇ ತಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು ಎಂದರೆ ನಿಜ. ನನ್ನ ತಂದೆಯು ಮರಣ ಹೊಂದುವ 15-20 ವರ್ಷಗಳ ಮೊದಲಿನಿಂದಲೂ ಯಾವುದೇ ಕೆಲಸ ಕಾರ್ಯಗಳನ್ನು ಮಾಡುತ್ತಿರಲ್ಲಿಲ್ಲ ಎಂದರೆ ಸಾಕ್ಷಿಯು 10 ವರ್ಷಗಳಿಂದ ಕೆಲಸ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯು ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ದಾವೆಯನ್ನು ಹೂಡುವ ಬಗ್ಗೆ ದಾವಾ ಆಸ್ತಿಗಳು ಹಾಗೂ ನಮ್ಮ ಮನೆತನದ ಬಗ್ಗೆ ನನ್ನ ತಾಯಿಯು ನನಗೆ ಹೇಳಿರುತ್ತಾರೆ. ಈ ದಾವೆಯನ್ನು ನನ್ನ ತಂದೆಯು ಹೂಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ನನ್ನ ತಂದೆಯು ಅನಕ್ಷರಸ್ಥರಾಗಿರುವುದರಿಂದ ಅವರು ಈ ದಾವೆಯನ್ನು ಹೂಡಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯು ತನ್ನ ಜೀವಿತಾವಧಿಯಲ್ಲಿ ನನ್ನ ದೊಡ್ಡಪ್ಪನಿಗೆ ದಾವಾ ಆಸ್ತಿಗಳಲ್ಲಿ ವಾಟ್ನಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ಈ ದಾವೆಯನ್ನು ಹೂಡುವ ಸಾಮರ್ಥ್ಯ ಇದ್ದರೂ ಸಹ ಅವರ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದರಿಂದ, ಆಲಿಸಿ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**